9. ಕೆಸರ್ತಿ	1. ರಾಮನಹಟ್ಟಿ	40. ಬಿದ್ನಾಳ್
10. ಬಿಂಜಲಭಾವಿ	2. ಕುಬಂಟನಹಾಳ್	5. ಕೊಲ್ಹಾರ ಪೊಲೀಸ್ ಠಾಣೆ:
11. ಅಸ್ಕಿ	3. ಹೆಚ್.ಹಿಪ್ಪರಗಿ	1. ಅರೆಶಂಕರ್ ಇಟಗಿ
12. ನಿರಲಗಿ	4. ಹುಣಶ್ಯಾಳ್	
13. ಜಲಮರ	5. ಸಂಕನಾಳ್	

249 ಶ್ರೀ. ಖಾದರ್ ಯು.ಟಿ. (ಮಂಗಳೂರು)
ಮಾನ್ಯ ಗೃಹ ಸಚಿವರು

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದ ಕೋಮುಗಲಭೆಗಳಲ್ಲಿ ಎಲ್ಲಾ ಸಮುದಾಯದ ನಿರಪರಾಧಿ ಅಮಾಯಕ ಜನರನ್ನು ಪೊಲೀಸರು ಬಂಧಿಸಿ, ಮೊಕದ್ದಮೆ ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಪೈಕಿ ಕೆಲವು ವಿದ್ಯಾರ್ಥಿಗಳು ಸೇರಿರುವುದು ನಿಜವೆ?

ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದ ಕೋಮು ಗಲಭೆಗಳಲ್ಲಿ ಭಾಗಿಯಾಗಿದ್ದ ಆರೋಪಿಗಳನ್ನು ಮಾತ್ರ ದಸ್ತಗಿರಿ ಮಾಡಲಾಗಿದೆ

ಮಂಗಳೂರು ಉತ್ತರ ಠಾಣೆಯ ಮೊಕದ್ದಮೆ ಸಂಖ್ಯೆ 215/2008 ಕಲಂ 143,147,148,188,427,353,332,333 ಜೊತೆಗೆ 149 ಐಪಿಸಿ ಮತ್ತು ಕಲಂ2 (ಎ)(ಬಿ) ಕೆ.ಪಿ.ಡಿ.ಪಿ.ಎಲ್.ಪಿ. ಆಕ್ಟ್ ಪ್ರಕರಣದಲ್ಲಿ 4 ಜನ ವಿದ್ಯಾರ್ಥಿಗಳು ಮತ್ತು ಮಂಗಳೂರು ಪೂರ್ವ ಠಾಣೆ ಮೊಕದ್ದಮೆ ಸಂಖ್ಯೆ 179/2008 ಕಲಂ 143,144,147,148,188,186,353,332 ಜೊತೆಗೆ 149 ಐಪಿಸಿ ಮತ್ತು ಕಲಂ 2 (ಎ)(ಬಿ) ಕೆ.ಪಿ.ಡಿ.ಎಲ್.ಪಿ. ಆಕ್ಟ್ (Karnataka Prohibition of Destruction of Loss of Property Act 1981) ಪ್ರಕರಣದಲ್ಲಿ ಒಬ್ಬ ವಿದ್ಯಾರ್ಥಿಯನ್ನು ದಸ್ತಗಿರಿ ಮಾಡಿದ್ದು, ಇವರುಗಳನ್ನು ದೋಷಾರೋಪಣೆಯಿಂದ ಕೈಬಿಡಲಾಗಿದೆ.

ಆ) ಈ ರೀತಿಯ ಮೊಕದ್ದಮೆಗಳಿಂದ ಇವರುಗಳ ಭವಿಷ್ಯಕ್ಕೆ ಹಾಗೂ ಉದ್ಯೋಗಾವಕಾಶಕ್ಕೆ ತೊಂದರೆಯಾಗುತ್ತಿರುವುದು ನಿಜವೇ?

ವಿದ್ಯಾರ್ಥಿಗಳ ಮೇಲೆ ದೋಷಾರೋಪಣಾ ಪಟ್ಟಿ ಸಲ್ಲಿಸದೇ ಇರುವುದರಿಂದ ಅವರುಗಳ ಭವಿಷ್ಯಕ್ಕೆ ತೊಂದರೆಯಾಗುವ ಪ್ರಮೇಯ ಇಲ್ಲ.

ಇ) ಇಂತಹ ಪ್ರಕರಣಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಿಂದಕ್ಕೆ ಪಡೆಯುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ?

ಈ ವಿದ್ಯಾರ್ಥಿಗಳ ಮೇಲೆ ದೋಷಾರೋಪಣಾ ಪಟ್ಟಿ ಸಲ್ಲಿಸದೇ ಇರುವುದರಿಂದ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.